ಅಂಗನವಾಡಿ ಕಟ್ಟಡಗಳ ನಿರ್ವಹಣೆಗಾಗಿ ಒದಗಿಸಲಾಗಿದ್ದು, ಸದರಿ ಅನುದಾನವನ್ನು ದುರಸ್ತಿಗಾಗಿ ವಿನಿಯೋಗಿಸಲು ಸೂಚನೆಗಳನ್ನು ನೀಡಲಾಗಿದೆ.

ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ 365 ಅಂಗನವಾಡಿ ಕೇಂದ್ರಗಳು ಮಂಜೂರಾಗಿದೆ. ಇವುಗಳಲ್ಲಿ 242 ಅಂಗನವಾಡಿ ಕೇಂದ್ರಗಳಿಗೆ ಸ್ವಂತ ಕಟ್ಟಡ ಮಂಜೂರಾಗಿದ್ದು ಉಳಿದ 123 ಕೇಂದ್ರಗಳಿಗೆ ಸ್ವಂತ ಕಟ್ಟಡ ನಿರ್ಮಿಸಬೇಕಾಗಿದೆ.

(ಇ) ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 129 ಅಂಗನವಾಡಿ ಕೇಂದ್ರಗಳಿಗೆ ಸಣ್ಣ ಪುಟ್ಟ ದುರಸ್ತಿ ಮಾಡಬೇಕಾದ ಅಗತ್ಯವಿದ್ದು ಹಂತಹಂತವಾಗಿ ವಿವಿಧ ಯೋಜನೆಗಳಡಿಯಲ್ಲಿ ದುರಸ್ತಿಗೆ ಕ್ರಮವಹಿಸಲಾಗುವುದು.

2008–09ರಿಂದ ಇಲ್ಲಿಯವರೆಗೆ 20 ಕಟ್ಟಡಗಳನ್ನು ದುರಸ್ತಿ ಮಾಡಲಾಗಿದೆ.

ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಶುಲ್ಕ ಮರುಪಾವತಿ

234 (477) ಶ್ರೀ ತನ್ವೀರ್ ಸೇಠ್ (ನರಸಿಂಹರಾಜ) :– ಮಾನ್ಯ ಸಮಾಜ ಕಲ್ಯಾಣ ಮತ್ತು ಬಂದೀಖಾನೆ ಸಚಿವವರು. ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಶುಲ್ಕ ಮರುಪಾವತಿ ಸಂಬಂಧವಾಗಿ 2004–05 ರಿಂದ ಇಲ್ಲಿಯವರೆಗೆ ಸರ್ಕಾರದಿಂದ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ ಮತ್ತು ಬಾಕಿ ಇರುವ ಮೊತ್ತಗಳ ವಿವರಗಳನ್ನು ವರ್ಷವಾರು ನೀಡುವುದು;

(ಆ) ಇದುವರೆಗೂ ಬಾಕಿ ಮೊತ್ತ ಬಿಡುಗಡೆ ಮಾಡದೇ ಇರಲು ಕಾರಣಗಳೇನು;

(ಇ) ಶುಲ್ಕ ಮರು ಪಾವತಿ ಬಿಲ್ಲುಗಳು ಬಾಕಿ ಉಳಿದಿದ್ದು, ಇದರಿಂದಾಗಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಬಾಕಿ ಮೊತ್ತ ಬಿಡುಗಡೆಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎ. ನಾರಾಯಣ ಸ್ವಾಮಿ : ಮಾನ್ಯ ಸಮಾಜ ಕಲ್ಯಾಣ ಮತ್ತು ಬಂದೀಖಾನೆ ಸಚಿವರು.

(ಅ) ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಶುಲ್ಕ ಮರುಪಾವತಿ ಸಂಬಂಧವಾಗಿ 2004–05ರಿಂದ 2011–12ನೇ ಸಾಲಿನವರೆಗೆ (ಅಕ್ಟೋಬರ್ 2011ರ ಅಂತ್ಯಕ್ಕೆ)

ಬಿಡುಗಡೆಯಾಗಿರುವ ಹಣದ ವಿವರ ಹಾಗೂ ಶುಲ್ಕ ಮರುಪಾವತಿಸಲು ಬಾಕಿ ಇರುವ ಬಿಲ್ಲುಗಳ ವರ್ಷವಾರು ವಿವರ ಈ ಕೆಳಗೆ ನಮೂದಿಸಿದೆ.

(ರೂ . ಲಕ್ಷಗಳಲ್ಲಿ)

ವರ್ಷ	ಒಟ್ಟು ಬಿಡುಗಡೆಯಾದ ಮೊತ್ತ	ಬಾಕಿ ಉಳಿದಿರುವ ಮೊತ್ತ
1	**5**	**6**
2004–05	1242.20	296.147
2005–06	1651.69	360.496
2006–07	2759.52	177.722
2007–08	3430.70	339.473
2008–09	4106.54	1555.183
2009–10	4500.00	3239.722
2010–11	4500.00	7179.321
2011–12	3500.00	1957.28
ಒಟ್ಟು	**25690.65**	**15105.344**

*** ಅಕ್ಟೋಬರ್ 2011ರ ಅಂತ್ಯಕ್ಕೆ**

(ಆ) ಹಿಂದುಳಿದ ವರ್ಗಗಳ ಅರ್ಹ ವಿದ್ಯಾರ್ಥಿಗಳಿಂದ ಬಂದ ಅರ್ಜಿಗಳನ್ನು ಮಂಜೂರು ಮಾಡಲು ಇರುವ ಮೊತ್ತ ಒದಗಿಸಿದ ಅನುದಾನಕ್ಕಿಂತ ಹೆಚ್ಚಿಗೆ ಆಗಿರುತ್ತದೆ. ಅನುದಾನದ ಕೊರತೆಯಿಂದ ಬಾಕಿ ಬಿಲ್ಲುಗಳನ್ನು ಮರುಪಾವತಿ ಮಾಡಲು ಸಾಧ್ಯವಾಗುತ್ತಿಲ್ಲ.

(ಇ) ಹೌದು.

(ಈ) ಬಾಕಿ ಇರುವ ಶುಲ್ಕ ಮರುಪಾವತಿ ಬಿಲ್ಲುಗಳನ್ನು ಪಾವತಿಸಲು ಪ್ರಯತ್ನಿಸಲಾಗುತ್ತಿದೆ.

ಕಾರಾಗೃಹಗಳಿಗೆ ಶಾಸಕರು ಭೇಟಿ ಪ್ರವೇಶಕ್ಕೆ ನಿಯಮಗಳು

235 (215) ಶ್ರೀ ತಿಪ್ಪೇಸ್ವಾಮಿ (ಚಳ್ಳಕೆರೆ) :– ಮಾನ್ಯ ಸಮಾಜ ಕಲ್ಯಾಣ ಮತ್ತು ಬಂದೀಖಾನೆ ಸಚಿವರು. ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–